**ಕರ್ನಾಟಕ ಸರ್ಕಾರ**

*ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ. ನೃಪತುಂಗ ರಸ್ತೆ. ಬೆಂಗಳೂರು.*

ಸಂಖ್ಯೆ:ಸಿ3[1]ಪ್ರಾ.ಶಿ: ಅ. ಶಿ. ನೇ 01/:2018–19 ದಿನಾಂಕ 19.12.2018

**ಜ್ಞಾಪನಾ**

ವಿಷಯ: 2018–19 ನೇ ಸಾಲಿನಲ್ಲಿ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಅತಿಥಿ ಶಿಕ್ಷಕರ ಗೌರವ ಸಂಭಾವನೆ ಪಾವತಿಸುವ ಬಗ್ಗೆ

ಉಲ್ಲೇಖ: 1.ಸರ್ಕಾರದ ಆದೇಶ ಸಂಖ್ಯೆ ಇಡಿ 228 ಪಿಬಿಎಸ್ 2018 ದಿನಾಂಕ 14.06.2018

2.ಈ ಕಛೇರಿ ಜ್ಞಾಪನಾ ಸಮಸಂಖ್ಯೆ ದಿನಾಂಕ 15.06.2018.

3.ಉಪನಿರ್ದೇಶಕರು, ಸಾ.ಶಿ.ಇ ಉಡುಪಿ ಇವರ ಇ ಮೇಲ್ ದಿನಾಂಕ 15.12.2018.

* * * *

ಉಲ್ಲೇಖ 01 ರ ಸರ್ಕಾರಿ ಆದೇಶದಲ್ಲಿ 2018–19 ನೇ ಸಾಲಿಗೆ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳ ಎದುರಾಗಿ ತಾತ್ಕಾಲಿಕ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಹಾಗೂ ಸದರಿ ಅತಿಥಿ ಶಿಕ್ಷಕರಿಗೆ ಮಾಸಿಕ ಗೌರವಧನ ದರಗಳನ್ನು ಅನುಕ್ರಮವಾಗಿ ರೂ 7500/– ಹಾಗೂ ರೂ 8000/–ಗಳು ಎಂಬುದಾಗಿ ನಿಗದಿಪಡಿಸಲಾಗಿದೆ. ಈ ಆದೇಶವಲ್ಲದೇ, ಇನ್ಯಾವುದೇ ಪರಿಷ್ಕೃತ ಆದೇಶ ಇರುವುದಿಲ್ಲ.

ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಉಡುಪಿ ಇವರು ಉಲ್ಲೇಖ 03 ರ ಇ ಮೇಲ್‌ನೊಂದಿಗೆ ಲಗತ್ತಿಸಿರುವ ಆದೇಶದಲ್ಲಿ ಅತಿಥಿ ಶಿಕ್ಷಕರ ಮಾಸಿಕ ಗೌರವಧನ ದರಗಳಲ್ಲಿ ವ್ಯತ್ಯಾಸವಿದ್ದು, ಸದರಿ ಆದೇಶವು ಅಧಿಕೃತವಲ್ಲ.

ಯಾವುದೇ ಜಿಲ್ಲೆಯಲ್ಲಿ ಉಲ್ಲೇಖ 01 ರ ಸರ್ಕಾರದ ಆದೇಶದಲ್ಲಿ ನಿಗದಿಯಾಗಿರುವ ದರಗಳ ಹೊರತಾಗಿ ಹಣ ಪಾವತಿ ಮಾಡಿದಲ್ಲಿ, ಪಾವತಿಸಿದ ಅಧಿಕಾರಿಗಳೇ ನೇರ ಹೊಣೆಗಾರರಾಗಿರುತ್ತಾರೆ. ಈ ನಿಟ್ಟಿನಲ್ಲಿ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಉಪನಿರ್ದೇಶಕರು ಮುನ್ನೆಚರಿಕೆ ಕ್ರಮವಹಿಸುವುದು.

(ಎಸ್. ಜಯಕುಮಾರ್)
ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ತುರ್ತು ಕ್ರಮಕ್ಕಾಗಿ.

ಪ್ರತಿ:–

1. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅಗತ್ಯ ಅನುಪಾಲನೆಗಾಗಿ
2. ಹಿರಿಯ ಸಹಾಯಕ ನಿರ್ದೇಶಕರು, ಇ–ಆಡಳಿತ, ಆಯುಕ್ತರ ಕಛೇರಿ, ಇವರಿಗೆ ಇಲಾಖಾ ವೆಬ್‌ಸೈಟ್ ನಲ್ಲಿ ಪ್ರಕಟಿಸುವ ಸಲುವಾಗಿ.
3. ಕಛೇರಿ ಪ್ರತಿ.